## ರೈತರ ಸಭೆ ಆಗ್ರಹ

# ಆಹಾರ ಸಾರ್ವಭೌಮತ್ವ

ಹುಬ್ಬಳ್ಳಿ, ನ. 26: ರೈತರು ಬೆಳೆಯುವ ಬೆಳೆಗಳ ಬಗ್ಗೆ ನಿರ್ಧರಿಸುವಾಗ ಕೇವಲ ಆರ್ಥಿಕ ಲಾಭವನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಳ್ಳದೆ, ಆಹಾರ ಸಾರ್ವಭೌಮತ್ವದ ಪ್ರಮುಖ ಗುರಿಯಾಗಬೇಕೆಂದು ರೈತರ ದುಂಡುಮೇಜಿನ ಸಭೆ ನಿರ್ಣಯ ಕೈಗೊಂಡಿದೆ.

ಧಾರವಾಡದಲ್ಲಿ ನಾಲ್ಕು ದಿನ ಜರಗಿದ ರೈತರ ದುಂಡುಮೇಜಿನ ಸಭೆಯಲ್ಲಿ ಕೃಷಿ ವಿಜ್ಞಾನಿಗಳು, ಸಂಶೋಧಕರು, ಕೃಷಿ ಆಡಳಿತಗಾರರು, ಸಾಮಾಜಿಕ ಸಂಶೋಧಕರು, ಪರಿಸರ ಚಿಂತಕರು, ಗ್ರಾಹಕ ಹಕ್ಕುಗಳ ಹೋರಾಟಗಾರರು, ಕುರಿಗಾಹಿಗಳು ಸೇರಿದಂತೆ ವಿವಿಧ ವಲಯದ 12 ಜನ ಪರಿಣತರು ಹಾಗೂ ರೈತರ ನ್ಯಾಯಮಂಡಳಿ ಸದಸ್ಯರುಗಳು ಕೃಷಿ ಸಂಶೋಧನೆ ಕುರಿತಾಗಿ ಚರ್ಚೆ-ವಾದ ಮಂಡನೆಯೊಂದಿಗೆ 15 ಪ್ರಮುಖ ನಿರ್ಣಯ ಕೈಗೊಳ್ಳಲಾಗಿದೆ.

ಕೃಷಿ ಭೂಮಿಯನ್ನು ಕೃಷಿಯೇತರ ಚಟುವಟಿಕೆಗಳಿಗೆ ರೈತರು ಹಾಗೂ ಇತರರು ಬಳಸಬಾರದು, ಯಾವುದೇ ಕಾರಣಕ್ಕಾಗಿಯೂ ಸರಕಾರ ಕೃಷಿ ಭೂಮಿ ಸ್ವಾಧೀನಪಡಿಸಿ ಕೊಳ್ಳಬಾರದು.

ಕೃಷಿ ಸಂಶೋಧನೆಯ ವಿಷಯಗಳು ಮತ್ತು ಆದ್ಯತೆಯ ಔಚಿತ್ಯ ಪ್ರಶ್ನಿಸಬಲ್ಲ ಶಕ್ತ ಸಂಘಟನೆ ಅವಶ್ಯಕತೆ ಇದೆ. ಕೃಷಿ ಸಂಶೋಧನೆ ಮಣ್ಣು ನೀರು ಮಾತ್ರವಲ್ಲದೆ, ರೈತರ ಕಾಳಜಿಗೂ ಯಾವುದೇ ತರಹದ ಮಾರಕವಾಗ ಬಾರದು. ರೈತ ತೀರ್ಪು ಮುಂದುವರಿಸಲು ತಳಮಟ್ಟದಲ್ಲಿ ಅಭಿಪ್ರಾಯ ರೂಪಿಸುವ ಕೆಲಸ ಆಗಬೇಕು. ರೈತ ತೀರ್ಪು ಪ್ರಕ್ರಿಯೆಯಲ್ಲಿ ರೈತ ಸಂಘಟನೆಗಳ ನಾಯಕರು ದೊಡ್ಡ ಸಂಖ್ಯೆಯಲ್ಲಿ ತೊಡಗಿಕೊಳ್ಳುವಂತಾಗಬೇಕು. ರೈತ ಸಂಘದ ಪ್ರತಿ ಗ್ರಾಮ ಘಟಕದಲ್ಲಿ ರೈತ ತೀರ್ಪಿನ ಮಹತ್ವದ ಚರ್ಚೆ ಅವಶ್ಯ.

ಎಲ್ಲ ಜನಪರ ಸಂಘಟನೆಗಳು ಹಾಗೂ ಸ್ವಯಂಸೇವಾ ಸಂಸ್ಥೆಗಳು ರೈತ ತೀರ್ಪಿನ ಸತ್ವವನ್ನು ಮನಗಂಡು ಪ್ರಕ್ರಿಯೆ ಮುಂದಕ್ಕೆ ಒಯ್ಯಬೇಕು. ರೈತ ತೀರ್ಪು ಮುಂದುವರಿಕೆಗೆ ರೈತರ ಭಾವನಾತ್ಮಕ ಸಿದ್ಧರಿರಬೇಕು. ಈ ನಿಟ್ಟಿನಲ್ಲಿ ಸಭೆ-ಸಮಾವೇಶ ಆಯೋಜನೆ ಅತ್ಯಗತ್ಯ.

ಕೃಷಿಮೇಳ, ಕೃಷಿ ಉತ್ಸವಗಳಲ್ಲಿ ಕೃವಿವಿಗಳು ಹಿಂದಿನ ವರ್ಷ ಕೈಗೊಂಡ ಕೃಷಿ ಸಂಶೋಧನೆ ಕುರಿತ ವಿವರಗಳನ್ನು ರೈತರೊಂದಿಗೆ ಹಂಚಿಕೊಳ್ಳಲು ರೈತ ತೀರ್ಪು ಮಾದರಿ ಕಾರ್ಯಕ್ರಮ ಕಡ್ಡಾಯ ಆಯೋಜಿಸಬೇಕು. ರೈತಪರ ಸಂಶೋಧನೆಗೆ ಪ್ರೇರೇಪಿಸು ವಂತಾಗಲು ಸಂವಾದ ಕೈಗೊಳ್ಳಬೇಕು.

ರೈತ ತೀರ್ಪಿನ ಆಶಯ, ಆರೋಗ್ಯ ಮತ್ತು ಆಹಾರದ ನಡುವೆ ಇರುವ ನಿಕಟ ಸಂಬಂಧ ಮನದಟ್ಟು ಮಾಡಲು ಗ್ರಾಹಕರು, ವೈದ್ಯರ ಜತೆ ಸಂವಾದ ಪ್ರಾರಂಭವಾಗಬೇಕೆಂಬ ನಿರ್ಣಯ ಕೈಗೊಳ್ಳಲಾಗಿದೆ.